ಸ್ವಭಾವಗಳನ್ನು ಗುರುತಿಸಿ ಅವುಗಳನ್ನು ಈ ಮೇಲೆ ತಿಳಿಸಿದ ಬಯೋಮೆಟ್ರಿಕ್ ಪ್ರೊಫೈಲುಗಳೊಂದಿಗೆ ಹೋಲಿಸಿ ಇಂತಹ ಪ್ರೊಫೈಲು ಇರುವ ವ್ಯಕ್ತಿ ಸರ್ಕಾರದ ನಿರ್ದಿಷ್ಟ ನಡೆಗೆ ಹೀಗೆ ಸ್ಪಂದಿಸಬಹುದು ಎಂದು 'ಪ್ರೊಬಬಿಲಿಸ್ಟಿಕ್' ಆಗಿ ಹೇಳುವುದು ಈ ವಿಭಾಗದ ಜವಾಬ್ದಾರಿ. ಕಂಪ್ಯೂಟರ್ ಸೈನ್ಸ್ ಪದವೀಧರನಾದ ರಾಘವ ಇಲ್ಲಿ ಮುಖ್ಯ ಪ್ರೋಗ್ರಾಮರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ. ಹೊಸದಾಗಿ ಸರ್ವರ್‌ಗೆ ಸೇರ್ಪಡೆಯಾಗುತ್ತಿದ್ದ ಜನರ ಬಯೋಮೆಟ್ರಿಕ್ ಮಾಹಿತಿಯನ್ನು, ಅದಾಗಲೇ ಕ್ರೋಡೀಕರಣಗೊಂಡ ಪ್ರೊಫೈಲುಗಳೊಂದಿಗೆ ತುಲನೆ ಮಾಡಿ ಪ್ರತ್ಯೇಕ ವ್ಯಕ್ತಿಯ ಮಾಹಿತಿ ಯಾವ್ಯಾವ ಪ್ರೊಫೈಲಿನೊಂದಿಗೆ ಎಷ್ಟೆಷ್ಟು ಶೇಕಡವಾರು ಹೋಲಿಕೆಯಾಗುವುದು ಎಂದು ತೋರಿಸುವಂತೆ ಸಾಫ್ಟ್‌ವೇರ್ ಒಂದನ್ನು ಬಯೋಮೆಟ್ರಿಕ್ ಸೈನ್ಸ್ ವಿಭಾಗದಲ್ಲಿ ಅಭಿವೃದ್ಧಿ ಪಡಿಸುತ್ತಿದ್ದರು. ಇದರ ಸಂಪೂರ್ಣ ಜವಾಬ್ದಾರಿ ರಾಘವ ಮತ್ತು ಅವನ ಕೈ ಕೆಳಗಿನ ನಾಲ್ಕು ಸಹೋದ್ಯೋಗಿಗಳದ್ದಾಗಿತ್ತು. ಸಂಬಂಧಪಟ್ಟ ಇಲಾಖೆಯ ನೇರ ಅನುಮೋದನೆಯೊಂದಿಗೆ ಈ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದುದರಿಂದ ಜನರ ಇಂಟರ್ನೆಟ್ ವಹಿವಾಟನ್ನು ನೋಡುವ ವಿಶೇಷ ಅನುಮತಿ ರಾಘವ ಮತ್ತವನ ತಂಡಕ್ಕೆ ದಯಪಾಲಿಸಲಾಗಿತ್ತು.

ಹೀಗೆ ದಿನಗಳು ಕಳೆಯುತ್ತಿದ್ದಾಗ 2016ರ ಏಪ್ರಿಲ್‌ನಲ್ಲಿ ಒದಗಿಬಂದ ಮಾಹಿತಿಯಲ್ಲಿ ರಾಘವನಿಗೆ ಒಂದು ಆಶ್ಚರ್ಯ ಕಾದಿತ್ತು. ಅದೊಂದು ನಾಲ್ಕು ವರ್ಷದ ಹುಡುಗನ ಡೇಟಾ. ಅದನ್ನು ಪ್ರೊಫೈಲಿಂಗ್‌ಗಾಗಿ ಸಾಫ್ಟ್‌ವೇರ್‌ನಲ್ಲಿ ಅಳವಡಿಸುತ್ತಲೇ ಈ ವ್ಯಕ್ತಿಯ ಡೇಟಾ ಅದಾಗಲೇ ಸಿಸ್ಟಮ್ಮಿನಲ್ಲಿ ಲಭ್ಯವಿರುವುದಾಗಿ ತೋರಿಸಿತು. ಇದು ಹಾಗಾಗಲು ಸಾಧ್ಯವೇ ಇರಲಿಲ್ಲ. ಆ ಹುಡುಗ ತನ್ನ ಬಯೋಮೆಟ್ರಿಕ್ಸ್ ಅನ್ನು ನೀಡುತ್ತಿದ್ದುದು ತನ್ನ ಜೀವನದಲ್ಲಿಯೇ ಮೊದಲ ಬಾರಿಯಾಗಿತ್ತು. ಮೊದಲಿಗೆ ಬಂದ ಡೇಟಾದಲ್ಲಿ ಏನೋ ದೋಷವಿರಬಹುದೆಂದು ರಾಘವ ಊಹಿಸಿ ಎರಡು ಬಾರಿ ಪುನಃ ಪರಿಶೀಲಿಸಿದ. ಇಲ್ಲ. ಎಲ್ಲವೂ ಸರಿಯಾಗಿಯೇ ಇತ್ತು. ನಂತರ ಮ್ಯಾಚ್ ಆಗುತಿದ್ದ ಸೋರ್ಸ್ ಮಾಹಿತಿಯನ್ನು ಪರಿಶೀಲಿಸಿದ. ಇನ್ನೊಂದು ಆಶ್ಚರ್ಯ. ಅದೊಂದು 2011ರ ಡೇಟಾವಾಗಿತ್ತು. ಈ ನಾಲ್ಕು ವರ್ಷದ ಹುಡುಗನ ಬಯೋಮೆಟ್ರಿಕ್ 65 ವರ್ಷದ ವ್ಯಕ್ತಿಯೊಬ್ಬರ ಡೇಟಾದೊಂದಿಗೆ 99.2 ಪ್ರತಿಶತ ಹೊಂದಿಕೆಯಾಗುತ್ತಿತ್ತು. ಗೊಂದಲಗೊಂಡ ರಾಘವ ಸಾಫ್ಟ್‌ವೇರ್‌ನ ಕೋಡ್‌ಗಳನ್ನು ಪರಿಶೀಲಿಸಲು, ಸಾಫ್ಟ್‌ವೇರನ್ನು ಮೂಲವಾಗಿ ಪ್ರೋಗ್ರಾಮ್ ಮಾಡಿದಾಗ, ಡಾ.ಅನುರಾಧರು 98 ಕ್ಕಿಂತಲೂ ಹೆಚ್ಚು ಪ್ರತಿಶತ ಹೋಲಿಕೆಯಾಗುವ ಬಯೋಮೆಟ್ರಿಕ್ ಮ್ಯಾಚ್ ಗಾಗಿ ಈ ಸಾಫ್ಟ್‌ವೇರನ್ನು ಪ್ರೋಗ್ರಾಮ್ ಮಾಡಿದ್ದರೆಂದು ರಾಘವನಿಗೆ ತಿಳಿದು ಬಂತು. ಅರ್ಥವಾಗದೆ ನೇರವಾಗಿ ಅನುರಾಧರ ಕೋಣೆಗೆ ನಡೆದ. ಅವರಿಗೆ ರಾಘವನು ಇಂದು ನಡೆದ ವೈಚಿತ್ರ್ಯವನ್ನು ವಿವರಿಸಲು ಮುಂದಾದ. ಕಂಪ್ಯೂಟರ್ ಮಾನಿಟರ್‌ನಲ್ಲಿ ಮುಖ ಇಟ್ಟಿದ್ದ ಡಾಕ್ಟರ್ ಇವನ ಬಾಯಲ್ಲಿ ಮ್ಯಾಚ್ ಪದ ಹೊರಹೋಮ್ಮುತ್ತಲೇ ಸಿಡಿಲು ಬಡಿದಂತವರಾಗಿ ಇವನ ಕಡೆಗೆ ಕ್ಷಣಕ್ಕೆ ತಿರುಗಿದರು. ರಾಘವ ಮಾತನಾಡುತ್ತಲೇ ಇದ್ದ. 'ಡಾಕ್ಟರ್! ಜನರನ್ನು ವರ್ಗೀಕರಿಸುವ ಈ ಸಾಫ್ಟವೇರ್ ಅನ್ನು ನೀವು ಮೂಲವಾಗಿ ಬರೆದಾಗ, ಅವರುಗಳ 98 ಶೇಕಡಾವಾರು ಬಯೋಮೆಟ್ರಿಕ್ ಮ್ಯಾಚ್ ಕಂಡುಹಿಡಿಯಲು ಏಕೆ ಬರೆದಿದ್ದೀರೆಂದು ನನಗೆ ಇನ್ನೂ ಅರ್ಥವೇ ಆಗುತ್ತಿಲ್ಲ' ಎಂದು ನಿಲ್ಲಿಸಿ ಕೈಯಲ್ಲಿದ್ದ ಪೇಪರ್‌ನಿಂದ ತಲೆ ಎತ್ತಿ ಇವರ ಕಡೆಗೆ ತಿರುಗಿದ. ಡಾಕ್ಟರ್ ಈ ಕ್ಷಣಕ್ಕಾಗಿಯೇ ಬಹಳ ವರ್ಷಗಳಿಂದ ಕಾಯುತ್ತಿದ್ದರು. ಅಷ್ಟು ಹೊತ್ತಿಗಾಗಲೇ ಅನುರಾಧರು ತಮ್ಮ ಆಸನದಿಂದ ಎದ್ದು ಕಾತರದಿಂದ ಇವನು ತರುತ್ತಿದ್ದ ಪೇಪರಗಳನ್ನು ನೋಡಲು ಇವನೆಡೆಗೆ ನಡೆದು ಬರುತ್ತಿದ್ದರು. ಅನುರಾಧರು ತನ್ನ ಯಾವುದೇ ಹಿಂದಿನ ಸಂವಾದದಲ್ಲಿಯೂ ಇಷ್ಟು ಉತ್ಸುಕರಾಗಿದ್ದು ಅವನಿಗೆ ನೆನಪಿಗೆ ಬರಲಿಲ್ಲ. ಪೇಪರ್‌ಅನ್ನು ನೋಡಿ ಅವರಿಂದ ಬಂದ ಮಾತು ಈ ಕೆಳಕಂಡಂತಿತ್ತು. 'ವೆರಿ ಗುಡ್! ರಾಘವ್